ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉನಿ : ಸುಮಪ : 2018–19 : ದಿನಾಂಕ : 11–10–2018

# ಪತ್ರಿಕಾ ಆಮಂತ್ರಣ

1. National Cyclone Risk Mitigation Project (NCRMP)
Workshop on "Cyclone and Flood Management"

Inauguration :
Gangaram Baderiya, IAS., Principal Secretary to Government
V.P. Ikkeri, IAS., Commissioner for Transport.
Dr. Srinivasa Reddy, Director, KSNDMC

Date: 12-10-2018 Friday Time: 10:00 a.m.
Venue: #419, 4th Floor, Vikasa Soudha, Bengaluru

Contact: Dr. G. Vishwanath, Mobile 98451 36219

2. 65ನೇ ಅಖಿಲ ಭಾರತ ಸಹಕಾರ ಸಪ್ತಾಹ ಪೂರ್ವಭಾವಿ ಸಭೆ:

ಅಧ್ಯಕ್ಷತೆ:
ಬಂಡೆಪ್ಪ ಖಾಶೆಂಪೂರ, ಸಹಕಾರ ಮತ್ತು ಕೃಷಿ ಉತ್ಪನ್ನ ಮಾರುಕಟ್ಟೆ ಸಚಿವರು

ದಿನಾಂಕ: 12–10–2018 ಶುಕ್ರವಾರ ಸಮಯ: ಬೆಳಿಗ್ಗೆ 11–30 ಗಂಟೆಗೆ
ಸ್ಥಳ: ಸಭಾಂಗಣ ಕೊಠಡಿ, ಸಂಖ್ಯೆ 318, ವಿಕಾಸ ಸೌಧ, ಮೂರನೇ ಮಹಡಿ, ಬೆಂಗಳೂರು

<u>**ಪತ್ರಿಕಾ ಪ್ರಕಟಣೆ**</u>

**ಸಂಖ್ಯೆ:1120/1230**

# ಕುಷ್ಠರೋಗ ಪತ್ತೆಹಚ್ಚುವ ಆಂದೋಲನ

ಬೆಂಗಳೂರು, ಅಕ್ಟೋಬರ್ 11, (ಕರ್ನಾಟಕ ವಾರ್ತೆ)

ಕುಷ್ಠರೋಗವನ್ನು ಆರಂಭಿಕ ಹಂತದಲ್ಲಿ ಪತ್ತೆ ಹಚ್ಚಿ ಚಿಕಿತ್ಸೆ ನೀಡಿದಲ್ಲಿ ಸಂಪೂರ್ಣವಾಗಿ ಗುಣಪಡಿಸಬಹುದಾಗಿದ್ದು ಅದಕ್ಕಾಗಿ ಈ ರೋಗದ ನಿರ್ಮೂಲನೆಗಾಗಿ ಬೆಂಗಳೂರು ನಗರ ಜಿಲ್ಲೆಯಾದ್ಯಂತ ಅಕ್ಟೋಬರ್ 22 ರಿಂದ ನವೆಂಬರ್ 4 ರವರೆಗೆ 14 ದಿನಗಳ ಕಾಲ ಕುಷ್ಠರೋಗ ಪತ್ತೆಹಚ್ಚುವ ಆಂದೋಲನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕುಷ್ಠರೋಗ ವಿಭಾಗದ ಜಂಟಿ ನಿರ್ದೇಶಕ ಡಾ. ನದೀಮ್ ಅಹ್ಮದ್ ಅವರು ತಿಳಿಸಿದರು.

ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಭಾರತ ಸರ್ಕಾರ ಲೆಪ್ರೆಸಿ ಕೇಸ್ ಡಿಟೆಕ್ಷನ್ ಕ್ಯಾಂಪೇನ್ ಮುಖೇನ ಕುಷ್ಠರೋಗ ನಿರ್ಮೂಲನೆಗಾಗಿ ಪಣತೊಟ್ಟಿದ್ದು 14 ದಿನಗಳ ಕುಷ್ಠರೋಗ ಪ್ರಕರಣ ಪತ್ತೆ ಆಂದೋಲನ ಕಾರ್ಯಕ್ರಮ ನಡೆಸಲು ರಾಜ್ಯದಿಂದ 11 ಜಿಲ್ಲೆಗಳನ್ನು ಆಯ್ಕೆಮಾಡಲಾಗಿದ್ದು ಇದರಲ್ಲಿ ಬೆಂಗಳೂರು ನಗರ ಜಿಲ್ಲೆ ಸಹ ಇದೆ. ಈ ಜಿಲ್ಲೆಯಲ್ಲಿ ಒಟ್ಟು ನಾಲ್ಕು ತಾಲ್ಲೂಕುಗಳಿದ್ದು, ಬೆಂಗಳೂರು ಉತ್ತರ 5,29,299 ಮನೆಗಳು ಹಾಗೂ 21,72,776 ಜನಸಂಖ್ಯೆ ಹೊಂದಿದೆ. ಬೆಂಗಳೂರು ದಕ್ಷಿಣ 3,86,944 ಮನೆಗಳು ಹಾಗೂ 16,27,446 ಜನಸಂಖ್ಯೆ, ಬೆಂಗಳೂರು ಪೂರ್ವ 3,04,601 ಮನೆಗಳು ಹಾಗೂ 12,31,766 ಜನಸಂಖ್ಯೆ ಮತ್ತು ಆನೇಕಲ್ ತಾಲ್ಲೂಕು 1,40,470 ಮನೆಗಳು ಹಾಗೂ 6,18,798 ಜನಸಂಖ್ಯೆ ಹೊಂದಿದೆ.

ಈ ಅಭಿಯಾನದಲ್ಲಿ ಆಶಾ ಕಾರ್ಯಕರ್ತೆಯರು ಪಾಲ್ಗೊಳ್ಳುತ್ತಿದ್ದು, ಪ್ರಾಥಮಿಕವಾಗಿ ರೋಗದ ಲಕ್ಷಣಗಳ ಕುರಿತ ತರಬೇತಿಯನ್ನು ನೀಡಲಾಗಿದೆ. ಬೆಂಗಳೂರು ನಗರ ಜಿಲ್ಲೆಯ ಒಟ್ಟು ನಾಲ್ಕು ತಾಲ್ಲೂಕುಗಳಲ್ಲಿ 3,825 ತಂಡಗಳಲ್ಲಿ 7,650 ಕಾರ್ಯಕರ್ತರು ಪ್ರತಿ ಮನೆಗೆ ಭೇಟಿನೀಡಿ ಪ್ರತಿಯೊಬ್ಬರನ್ನು ತಪಾಸಣೆ ನಡೆಸಲಿದ್ದಾರೆ. ಈ ಅಭಿಯಾನದ ಮೇಲ್ವಿಚಾರಕರಾಗಿ ಒಟ್ಟು 765 ಕಾರ್ಯಕರ್ತರು ಕಾರ್ಯನಿರ್ವಹಿಸಲಿದ್ದಾರೆ.

ಈ ಕಾರ್ಯಕ್ರಮದ ಯಶಸ್ವಿ ಅನುಷ್ಠಾನಕ್ಕೆ ಸಾರ್ವಜನಿಕ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಪಂಚಾಯತ್ ರಾಜ್, ಸಾರ್ವಜನಿಕ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಕಾರದೊಂದಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಭಿಯಾನವನ್ನು ಹಮ್ಮಿಕೊಂಡಿದೆ.

ಈ ಆಂದೋಲನದಲ್ಲಿ ಪತ್ತೆ ಹಚ್ಚದೆ ಉಳಿದ ಪ್ರಕರಣಗಳನ್ನು ಏಕಕಾಲದಲ್ಲಿ ಶೀಘ್ರಗತಿಯಲ್ಲಿ ಪತ್ತೆ ಹಚ್ಚುವುದು, ಹಾಗೂ ಸಮುದಾಯದಲ್ಲಿ ರೋಗ ಸಂವಹನ ತಡೆಗಟ್ಟುವುದು. ಒಟ್ಟಾರೆ ಕುಷ್ಠರೋಗದಿಂದ ಉಂಟಾಗುವ ಗ್ರೇಡ್ – 2 ಅಂಗವಿಕಲತೆಯನ್ನು 10 ಲಕ್ಷ ಜನರಲ್ಲಿ ಒಂದಕ್ಕೆ ಇಳಿಸುವುದು ಗುರಿಯಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಅಧಿಕಾರಿ ಡಾ.ಶ್ರೀನಿವಾಸ್, ನ್ಯೂಡಲ್ ಅಧಿಕಾರಿ ಡಾ. ರಜನಿ ಸೇರಿದಂತೆ ಅನೇಕ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಕುಷ್ಠರೋಗ ಕುರಿತ ಮಾಹಿತಿ:

- ಕುಷ್ಠರೋಗವು ಒಂದು ಬ್ಯಾಕ್ಟೀರಿಯಾದಿಂದ ಬರುವ ಕಾಯಿಲೆಯಾಗಿದ್ದು, ಜಾತಿ, ಲಿಂಗ, ಸ್ಥಾನಮಾನ ಭೇಧವಿಲ್ಲದೆ ಯಾರಿಗೆ ಬೇಕಾದರೂ ಬರಬಹುದು.
- ಶೀಘ್ರ ಪತ್ತೆ, ಎಂ.ಡಿ.ಟಿ. ಚಿಕಿತ್ಸೆಯಿಂದ ಕುಷ್ಠರೋಗದಿಂದ ಉಂಟಾಗುವ ಅಂಗವಿಕಲಯನ್ನು ತಡೆಗಟ್ಟಬಹುದು.
- ಶ್ರೀಘ್ರ ಪತ್ತೆಯಿಂದ ಸಂಪೂರ್ಣ ಗುಣಮುಖರಾಗಬಹುದು.
- ಎಂ.ಡಿ.ಟಿ.ಯು. ಅತ್ಯಂತ ಪ್ರಬಲ ಔಷಧಿ ಹಾಗೂ ಎಲ್ಲಾ ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಉಚಿತ.

ಕುಷ್ಟರೋಗ ಪತ್ತೆಹಚ್ಚುವ ಆಂದೋಲನದ ವಿಶೇಷತೆಗಳು:

- ಪುರುಷ ಹಾಗೂ ಮಹಿಳಾ ಸ್ವಯಂ ಸೇವಾ ಕಾರ್ಯಕರ್ತರು, ಆರೋಗ್ಯ ಕಾರ್ಯಕರ್ತರು ಹಾಗೂ ಆಶಾ ಕಾರ್ಯಕತ್ರ್ಯ ಮುಖೇನ ಯೋಜಿಒ ಅವಧಿಯಲ್ಲಿ ಮನೆ–ಮನೆ ಭೇಟಿ ನೀಡಿ ಕುಟುಂಬದ 2 ವರ್ಷ ಮೇಲ್ಪಟ್ಟ ಎಲ್ಲಾ ಸದಸ್ಯರನ್ನು ಕುಷ್ಠಗೋಗ ತಪಾಸಣೆಗೆ ಒಳಪಡಿಸುವುದು.

- ಸಂಶಯಾಸ್ಪದ ಪ್ರಕರಣಗಳನ್ನು ವೈದ್ಯಾಧಿಕಾರಿಗಳ ಮುಖೇನ ಸೂಕ್ತ ತಪಾಸಣೆ ಒಳಪಡಿಸಿ, ದೃಢಪಟ್ಟ ಪ್ರಕರಣಗಳಿಗೆ ಚಿಕಿತ್ಸೆ ನೀಡುವುದು. (ಸಮೀಕ್ಷಾ ಅವಧಿಯ ನಂತರವೂ 15 ದಿನಗಳ ಕಾಲ ಅಗತ್ಯ ಅನುಸರಣಾ ಕ್ರಮ ಕೈಗೊಳ್ಳುವುದು.)
- ಎಲ್ಲಾ ಸಂಪನ್ಮೂಲಗಳನ್ನು ಸಜ್ಜುಗೊಳಿಸಿ, ಕುಷ್ಠರೋಗದ ನಿರ್ಮೂಲನೆ ಬಗ್ಗೆ ಜಾಗೃತಿ ಮೂಡಿಸಲು ಸಮುದಾಯದ ಗಮನ ಸೆಳೆಯುವುದು.

**ಸಂಖ್ಯೆ:1121/1231**

## "ಆರೋಗ್ಯ ಕರ್ನಾಟಕ" ಯೋಜನೆ ಕುರಿತ ಮಾಹಿತಿ

**ಬೆಂಗಳೂರು, ಅಕ್ಟೋಬರ್ 11, (ಕರ್ನಾಟಕ ವಾರ್ತೆ)**

**ಆರೋಗ್ಯ ಕರ್ನಾಟಕ ಯೋಜನೆಯ ವಿಶೇಷತೆ:**

- **ರಾಜ್ಯದ ನಿವಾಸಿಗಳಿಗೆ ಸಾರ್ವತ್ರಿಕ ಆರೋಗ್ಯ ರಕ್ಷಣೆ ಒದಗಿಸಲು ಕರ್ನಾಟಕ ಸರ್ಕಾರವು ಜಾರಿಗೊಳಿಸಿರುವ ಸಮಗ್ರ ಯೋಜನೆ 'ಆರೋಗ್ಯ ಕರ್ನಾಟಕ'**
- **ಈ ಯೋಜನೆ ದಿನಾಂಕ: 02–03–2018 ರಿಂದ ಜಾರಿ ಬಂದಿರುತ್ತದೆ.**
- **ಸಾರ್ವಜನಿಕರಿಗೆ ಒಂದೇ ಯೋಜನೆಯಡಿಯಲ್ಲಿ ಪ್ರಾಥಮಿಕ ಹಂತ, ದ್ವಿತೀಯ ಹಂತ, ತೃತೀಯ ಹಂತದ ಆರೋಗ್ಯ ಸಮಸ್ಯೆಗೆ ಚಿಕಿತ್ಸೆ ಸೇರಿದಂತೆ ಹಾಗೂ ತುರ್ತು ಚಿಕಿತ್ಸೆಗಳು ಲಭ್ಯವಾಗುತ್ತವೆ.**

**ಯಶಸ್ವಿನಿ ಯೋಜನೆ ಈಗ ಮುಕ್ತಾಯಗೊಂಡಿದೆಯೇ:**

- **ಯಶಸ್ವಿನಿ ಯೋಜನೆಯು ದಿನಾಂಕ: 31–05–2018 ಕ್ಕೆ ಮುಕ್ತಾಯಗೊಂಡಿದ್ದು ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ವಿಲೀನಗೊಂಡಿರುತ್ತದೆ.**
- **ಈ ಹಿಂದೆ ಅನುಷ್ಠಾನದಲ್ಲಿದ್ದ ಯಶಸ್ವಿನಿ ಯೋಜನೆ, ವಾಜಪೇಯಿ ಆರೋಗ್ಯಶ್ರೀ, ರಾಜೀವ್ ಆರೋಗ್ಯ ಭಾಗ್ಯ ಯೋಜನೆ, (RBSK) ಯೋಜನೆ, ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಯೋಜನೆ (RBSK) ಮುಖ್ಯಮಂತ್ರಿ ಸಾಂತ್ವನ ಹರೀಶ್ ಯೋಜನೆ ಮತ್ತು ಇಂದಿರಾ ಸುರಕ್ಷಾ ಯೋಜನೆಗಳು ಆರೋಗ್ಯ ಕರ್ನಾಟಕ ಯೋಜನೆಯೊಂದಿಗೆ ವಿಲೀನಗೊಂಡಿವೆ.**

- ಈಗ ದೊಡ್ಡಮಟ್ಟದ ಯೋಜನೆಯಾದ "ಆರೋಗ್ಯ ಕರ್ನಾಟಕ" ದಲ್ಲಿ ಇನ್ನೂ ಹೆಚ್ಚಿನ ಚಿಕಿತ್ಸೆಗಳನ್ನು ರಾಜ್ಯದ ಎಲ್ಲಾ ಜನರಿಗೆ ನೀಡಲಾಗುತ್ತಿದೆ.

ಫಲಾನುಭವಿ ಮಾನದಂಡಗಳೇನು?

- ಆರೋಗ್ಯ ಕರ್ನಾಟಕ ಯೋಜನೆಯಡಿ ಫಲಾನುಭವಿಗಳನ್ನು ಎರಡು ವರ್ಗಗಳಾಗಿ ವಿಂಗಡಿಸಲಾಗಿದೆ.
- ಅರ್ಹತಾ ರೋಗಿ: 2013 ರ ಆಹಾರ ಭದ್ರತಾ ಕಾಯಿದೆಯಡಿ ಬಿಪಿಎಲ್ ಪಡಿತರ ಚೀಟಿ ಹೊಂದಿರುವ ರೋಗಿಗಳು ಈ ವರ್ಗದಲ್ಲಿ ಸೇರಿರುತ್ತಾರೆ. ಅರ್ಹತಾ ರೋಗಿಗಳಿಗೆ ಬಹುತೇಕ ಉಚಿತ ಚಿಕಿತ್ಸೆ ಲಭ್ಯವಿದೆ.
- ಸಾಮಾನ್ಯ ರೋಗಿ: 2013 ರ ಆಹಾರ ಭದ್ರತಾ ಕಾಯಿದೆಯಡಿ ಎಪಿಎಲ್ ಪಡಿತರ ಚೀಟಿ ಹೊಂದಿರುವವರು ಅಥವಾ ಯಾವುದೇ ಪಡಿತರ ಚೀಟಿ ಹೊಂದಿಲ್ಲದ ರೋಗಿಗಳು. ಸಾಮಾನ್ಯ ರೋಗಿಗಳಿಗೆ ಯೋಜನೆಯ ಪ್ಯಾಕೇಜ್ ದರದ ಶೇಕಡಾ 30 ರಷ್ಟನ್ನು ಸರ್ಕಾರ ಭರಿಸುತ್ತದೆ.

ವಂತಿಕೆ ಪಾವತಿಸಬೇಕೆ?

- ಯಶಸ್ವಿನಿ ಯೋಜನೆಯಲ್ಲಿ ವಾರ್ಷಿಕ ವಂತಿಗೆ ಪಾವತಿಸಿದಂತೆ ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಯಾವುದೇ ವಂತಿಗೆ ಪಾವತಿಸಬೇಕಾಗಿಲ್ಲ.

ಆರೋಗ್ಯ ಕರ್ನಾಟಕ ಯೋಜನೆ ಯಶಸ್ವಿನಿ ಯೋಜನೆಗಿಂತ ಹೇಗೆ ಭಿನ್ನವಾಗಿದೆ?

- 'ಯಶಸ್ವಿನಿ' ಯೋಜನೆ ಕೇವಲ ಸಹಕಾರ ಸಂಘಗಳ ಸದಸ್ಯರಿಗೆ ಮಾತ್ರ ಸೀಮಿತವಾಗಿತ್ತು.
- 'ಆರೋಗ್ಯ ಕರ್ನಾಟಕ' ಯೋಜನೆಯು ಸಹಕಾರ ಸಂಘಗಳ ಸದಸ್ಯರೂ ಸೇರಿದಂತೆ ರಾಜ್ಯದ ಎಲ್ಲ ನಿವಾಸಿಗಳಿಗೂ ಲಭ್ಯವಿದೆ.
- 'ಯಶಸ್ವಿನಿ' ಯೋಜನೆಯಡಿಯಲ್ಲಿ ದ್ವಿತೀಯ ಹಾಗೂ ತೃತೀಯ ಹಂತದ 823 ಚಿಕಿತ್ಸೆಗಳನ್ನು ಮಾತ್ರ ಒದಗಿಸುತಿತ್ತು.
- ಆರೋಗ್ಯ ಕರ್ನಾಟಕ ಯೋಜನೆಯು ಪ್ರಾಥಮಿಕ, ದ್ವಿತೀಯ, ತೃತೀಯ ಹಾಗೂ ತುರ್ತು ಚಿಕಿತ್ಸೆಗಳೂ ಸೇರಿದಂತೆ 1516 ಚಿಕಿತ್ಸೆಗಳನ್ನು ಒದಗಿಸುತ್ತದೆ.

- ಆರೋಗ್ಯ ಕರ್ನಾಟಕ' ಯೋಜನೆಯಲ್ಲಿ ವೈದ್ಯರ ಸಮಾಲೋಚನಾ ಶುಲ್ಕ ಇರುವುದಿಲ್ಲ. ಶಸ್ತ್ರಚಿಕಿತ್ಸೆಯ ಪೂರ್ವ ಅಥವಾ ನಂತರದ ಸ್ಥಿರೀಕರಣ ವೈದ್ಯಕೀಯ ಆರೈಕೆ ಇರುತ್ತದೆ ಹಾಗೂ ಅನುಸರಣೆ ಚಿಕಿತ್ಸೆ ಮತ್ತು ವೈದ್ಯಕೀಯ ನಿರ್ವಹಣೆ **(Medical Management)** ಸಹ ಇರುತ್ತದೆ.
- ಯಶಸ್ವಿನಿ ಯೋಜನೆಯಲ್ಲಿ ದೊರಕುತ್ತಿದ್ದ ಚಿಕಿತ್ಸೆಗಳು ಆರೋಗ್ಯ ಕರ್ನಾಟಕ ಯೋಜನೆಯಡಿಯಲ್ಲಿ ಸಹ ದೊರೆಯುತ್ತಿದ್ದು, ಸಾರ್ವಜನಿಕರ ಚಿಕಿತ್ಸೆಗೆ ಯಾವುದೇ ರೀತಿಯಲ್ಲಿಯೂ ಸಹ ದಕ್ಕೆ ಬರುವುದಿಲ್ಲ.

ನೋಂದಣಿ ಹೇಗೆ ಮಾಡಲಾಗುತ್ತದೆ?

- ಆರೋಗ್ಯ ಕರ್ನಾಟಕ ಯೋಜನೆಯ ಅಡಿಯಲ್ಲಿ ರೋಗಿಗಳ ನೋಂದಣಿ ಮಾಡಲಾಗುತ್ತದೆ.
- ನಿಮಗೆ ಹುಷಾರಿಲ್ಲದಾಗ ನಿಮ್ಮ ಆಧಾರ್ ಕಾರ್ಡ್ ಮತ್ತು ಪಡಿತರ ಚೀಟಿಗಳೊಂದಿಗೆ ಹತ್ತಿರದ ಆಸ್ಪತ್ರೆಗೆ ಬನ್ನಿ. ನೋಂದಣಿ ಕೇಂದ್ರಗಳಲ್ಲಿ ನೋಂದಣಿ ಮಾಡಿಸಿಕೊಂಡು, ರೂ 10/- (ಹತ್ತು) ಪಾವತಿಸಿ, ಆರೋಗ್ಯ ಕಾರ್ಡ್‌ನ್ನು ಪಡೆದುಕೊಳ್ಳಿ.
- ಪ್ರಸ್ತುತ ಆರೋಗ್ಯ ಕಾರ್ಡುಗಳನ್ನು ಪ್ರಥಮ ಹಂತದ ಪ್ರಮುಖ 11 ಆಸ್ಪತ್ರೆಗಳಲ್ಲಿ ಮಾತ್ರ ವಿತರಿಸಲಾಗುತ್ತಿದ್ದು, ಇತರ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ನೋಂದಣಿಯನ್ನು ಶೀಘ್ರದಲ್ಲೇ ಪ್ರಾರಂಭಿಸಲಾಗುವುದು.

ಸಾಮಾನ್ಯ ಕಾಯಿಲೆಗಳಿಗೆ ಚಿಕಿತ್ಸೆ ಸಿಗುತ್ತದೆಯೇ?

- ಪ್ರಾಥಮಿಕ ಹಂತದ ಕಾಯಿಲೆಗಳು ಮತ್ತು ದ್ವಿತೀಯ ಹಂತದ ಸಾಮಾನ್ಯ ಚಿಕಿತ್ಸೆಗಳನ್ನು ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ಉಚಿತವಾಗಿ ಅಥವಾ ಅತ್ಯಲ್ಪ ಶುಲ್ಕ ಪಾವತಿಸಿ ಪಡೆಯಬಹುದು.

ದೊಡ್ಡ ಕಾಯಿಲೆ ಬಂದರೆ ಏನು ಮಾಡಬೇಕು?

- ದ್ವಿತೀಯ ಹಂತದ ಕ್ಲಿಷ್ಟಕರ ಮತ್ತು ತೃತೀಯ ಹಂತದ ದೊಡ್ಡ ಕಾಯಿಲೆಗಳು ಬಂದಾಗ ಸಾರ್ವಜನಿಕರು ಕೊರಗಬೇಕಾಗಿಲ್ಲ. ಪಡಿತರ ಚೀಟಿ ಮತ್ತು ಆಧಾರ್ ಕಾರ್ಡಿನೊಂದಿಗೆ ನಿಮ್ಮ ಹತ್ತಿರದ ಸರ್ಕಾರ ಆಸ್ಪತ್ರೆಗೆ ಹೋಗಿ.

- ಅಲ್ಲಿಯೇ ಚಿಕಿತ್ಸೆ ನೀಡಲಾಗುತ್ತದೆ. ಅಗತ್ಯವಿದ್ದರೆ ಜಿಲ್ಲಾ ಮಟ್ಟದ ಸಾರ್ವಜನಿಕ ಆರೋಗ್ಯ ಸಂಸ್ಥೆಗೆ ರೆಫರ್ ಮಾಡುತ್ತಾರೆ. ಅಲ್ಲಿ ಚಿಕಿತ್ಸಾ ಸಾಮರ್ಥ್ಯ ಇಲ್ಲದಿದ್ದರೆ ನೋಂದಾಯಿತ ಖಾಸಗಿ ಆಸ್ಪತ್ರೆಗೆ ರೆಫರ್ ಮಾಡುತ್ತಾರೆ.
- ಆಗ ಸಾರ್ವಜನಿಕರು ತಾವು ಇಚ್ಚಿಸುವ ಯಾವುದೇ ನೋಂದಾಯಿತ ಖಾಸಗಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಳ್ಳಬಹುದು

ತುರ್ತು ಚಿಕಿತ್ಸೆಗಳಿಗೆ ಏನು ಮಾಡಬೇಕು?

- ತುರ್ತು ಚಿಕಿತ್ಸೆಗಳಿಗೆ ಸಾರ್ವಜನಿಕರು ಕೂಡಲೇ ಹತ್ತಿರದ ಸರ್ಕಾರಿ ಅಥವಾ ನೋಂದಾಯಿತ ಖಾಸಗಿ ಆಸ್ಪತ್ರೆಗಳಿಗೆ ಹೋಗಿ ಚಿಕಿತ್ಸೆ ಪಡೆದುಕೊಳ್ಳಬಹುದು.
- ತುರ್ತು ಚಿಕಿತ್ಸೆಗಳಿಗೆ ಸಾರ್ವಜನಿಕ ಆರೋಗ್ಯ ಸಂಸ್ಥೆಗಳಿಂದ ರೆಫರ್ ಪಡೆಯುವ ಅಗತ್ಯ ಇರುವುದಿಲ್ಲ.

ಯಾವ ಚಿಕಿತ್ಸೆಗಳಿಗೆ ಎಷ್ಟು ಮೊತ್ತ ಲಭ್ಯವಿರುತ್ತದೆ?

- ಐದು ಸದಸ್ಯರ ಒಂದು ಕುಟುಂಬಕ್ಕೆ (ಅರ್ಹತಾ ಕುಟುಂಬ) ನಿರ್ದಿಷ್ಟ ಕ್ಲಿಷ್ಟಕರ ದ್ವಿತೀಯ ಹಂತದ ಚಿಕಿತ್ಸೆಗಳಿಗಾಗಿ ಒಂದು ವರ್ಷಕ್ಕೆ ರೂ 30,000/- ಗಳವರೆಗೆ ಚಿಕಿತ್ಸಾ ವೆಚ್ಚವನ್ನು ಭರಿಸಲಾಗುವುದು,.

- ನಿರ್ದಿಷ್ಟ ತೃತೀಯ ಹಂತದ ಆರೋಗ್ಯ ಚಿಕಿತ್ಸೆಗಳಿಗೆ ಒಂದು ವರ್ಷಕ್ಕೆ ಒಂದು ಕುಟುಂಬಕ್ಕೆ (ಆರ್ಹತಾ ಕುಟುಂಬ) ರೂ 1.50 ಲಕ್ಷಗಳವರೆಗೆ ಒದಗಿಸಲಾಗುವುದು.
- ಈ ಮಿತಿಯು ಪೂರ್ಣವಾಗಿ ಉಪಯೋಗವಾದ ಮೇಲೆ ತುರ್ತು ಚಿಕಿತ್ಸಾ ಸಂದರ್ಭ ಬಂದಲ್ಲಿ, ಇನ್ನೂ ಹೆಚ್ಚಿನ ರೂ 50,000/- ಗಳ ಆರ್ಥಿಕ ನೆರವನ್ನು ಒದಗಿಸಲಾಗುವುದು.
- ಸಾಮಾನ್ಯ ರೋಗಿಗಳಿಗೆ (ಎಪಿಎಲ್ ಕುಟುಂಬ) ಪ್ಯಾಕೇಜ್ ಮೊತ್ತದ ಶೇ 30/- ರಷ್ಟನ್ನು ಸರ್ಕಾರ ಭರಿಸುತ್ತದೆ.

ಚಿಕಿತ್ಸೆಗಳ ಮಾಹಿತಿ ಎಲ್ಲಿ ಸಿಗುತ್ತದೆ?

- ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ಲಭ್ಯವಿರುವ ಚಿಕಿತ್ಸೆಗಳ ಮಾಹಿತಿಯನ್ನು ಸಾರ್ವಜನಿಕರ ಮಾಹಿತಿಗಾಗಿ ಪ್ರದರ್ಶಿಸಲಾಗಿದೆ.

- **ಯಾವ ಆಸ್ಪತ್ರೆಗಳಲ್ಲಿ ಯಾವ ಚಿಕಿತ್ಸೆಗಳು ಲಭ್ಯ ಎಂಬ ಮಾಹಿತಿಯನ್ನು ಈ ವೆಬ್‌ಸೈಟ್‌ಗಳಲ್ಲಿ www.arogya.karnataka.gov.in, www.sast.gov.in/homewww.karnataka.gov.in/hfw ಪಡೆದುಕೊಳ್ಳಬಹುದಾಗಿದೆ.**

**ಸಂಖ್ಯೆ:1123/1233**

## ಅಕ್ಟೋಬರ್ 24 ರಂದು ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ

**ಬೆಂಗಳೂರು, ಅಕ್ಟೋಬರ್ 11, (ಕರ್ನಾಟಕ ವಾರ್ತೆ)**

ರಾಜ್ಯ ಮಟ್ಟದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಸಮಾರಂಭವು ಸರ್ಕಾರದ ವತಿಯಿಂದ ಅಕ್ಟೋಬರ್ 24 ರಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಹಮ್ಮಿಕೊಳ್ಳಲಾಗಿದೆ.

ಸಮಾರಂಭದ ಉದ್ಘಾಟನೆಯನ್ನು ಮುಖ್ಯಮಂತ್ರಿ ಹೆಚ್. ಡಿ. ಕುಮಾರಸ್ವಾಮಿ ಅವರು ನೆರವೇರಿಸಲಿದ್ದಾರೆ. ಈ ಸಮಾರಂಭದಲ್ಲಿ ಸಚಿವರು, ಸಂಸದರು, ಶಾಸಕರುಗಳು ಮತ್ತು ಇತರ ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ:1124/1234**

## ನಿರುದ್ಯೋಗ ಪದವೀಧರರಿಗೆ ಸ್ವಯಂ ಉದ್ಯೋಗ ಸಾಲ

ಬೆಂಗಳೂರು, ಅಕ್ಟೋಬರ್ 11, (ಕರ್ನಾಟಕ ವಾರ್ತೆ)

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ 2018–19ನೇ ಸಾಲಿಗೆ ಹಿಂದುಳಿದ ವರ್ಗಗಳ ನಿರುದ್ಯೋಗ ಪದವೀಧರರಿಗೆ ಸ್ವಯಂ ಉದ್ಯೋಗ ಸಾಲ ಸೌಲಭ್ಯವನ್ನು ವಾರ್ಷಿಕ ಶೇ. 6 ರ ಬಡ್ಡಿದಲ್ಲಿ ಗರಿಷ್ಠ ರೂ. 10.00 ಲಕ್ಷಗಳ ವರೆಗೆ ಸಾಲ ಒದಗಿಸಲಾಗುತ್ತದೆ.

ಈ ಯೋಜನೆಯಲ್ಲಿ ಸಾಲ ಸೌಲಭ್ಯ ಪಡೆಯಲು ಇಚ್ಛಿಸುವ ಹಿಂದುಳಿದ ವರ್ಗಗಳ ನಿರುದ್ಯೋಗ ಪದವೀಧರರಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ನಿಗದಿತ ಅರ್ಜಿ ನಮೂನೆಗಳನ್ನು ನಿಗಮದ ಜಿಲ್ಲಾ ವ್ಯವಸ್ಥಾಪಕರ ಕಚೇರಿಯಲ್ಲಿ ಅಥವಾ ಆಯಾ ತಾಲ್ಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ವಿಸ್ತರಣಾಧಿಕಾರಿಗಳ

ಕಚೇರಿಯಲ್ಲಿ ಅರ್ಜಿ ಪಡೆದು ಭರ್ತಿಮಾಡಿದ ಅರ್ಜಿಗಳನ್ನು ಅಗತ್ಯ ದಾಖಲಾತಿಗಳೊಂದಿಗೆ ಸಲ್ಲಿಸಲು ಕೊನೆಯ ದಿನಾಂಕ: 20-10-2018.

ಒಂದು ಬಾರಿ ನಿಗಮದ ಯಾವುದಾದರೂ ಯೋಜನೆಯಲ್ಲಿ ಪ್ರಯೋಜನೆ ಪಡೆದಿದ್ದಲ್ಲಿ ಅಂತಹವರು ಹಾಗೂ ಅವರ ಕುಟುಂಬದವರು ಮತ್ತೊಮ್ಮೆ ಸೌಲಭ್ಯ ಕೋರಿ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ. ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

**ನಿಗಮದ ಯೋಜನೆಗಳಲ್ಲಿ ಸೌಲಭ್ಯ ಪಡೆಯಲು ಹೊಂದಿರಬೇಕಾದ ಸಾಮಾನ್ಯ ಅರ್ಹತೆಗಳು:**

1. ಈ ಯೋಜನೆಯಲ್ಲಿ ಆರ್ಥಿಕ ಸಹಾಯ ಪಡೆಯಲು ಅಭ್ಯರ್ಥಿಯು ದಿನಾಂಕ: 30-03-2018 ರ ಸಂಖ್ಯೆ: ಸಕಇ 225 ಬಿಸಿಎ 2000 ಆದೇಶದಲ್ಲಿ ಗುರುತಿಸಿದ ಪ್ರವರ್ಗ- 2ಎ, 3ಎ ಮತ್ತು 3ಬಿಗೆ ಸೇರಿದವರಾಗಿರಬೇಕು. (ವಿಶ್ವಕರ್ಮ ಅದರ ಉಪ ಸಮುದಾಯಗಳನ್ನು ಮತ್ತು ಮತೀಯ ಅಲ್ಪಸಂಖ್ಯಾತರನ್ನು ಹೊರತುಪಡಿಸಿ) 2. ಅರ್ಜಿದಾರರ ಕುಟುಂಬ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದವರಿಗೆ ರೂ. 40,000/- ಗಳು ಪಟ್ಟಣ ಪ್ರದೇಶದವರಿಗೆ ರೂ. 55,000/- ಗಳ ಒಳಗಿರಬೇಕು. 3. ಅರ್ಜಿದಾರರು ಅಂಗೀಕೃತ ವಿಶ್ವವಿದ್ಯಾಲಯದಲ್ಲಿ ಪದವೀಧರರಾಗಿದ್ದು, ನಿರುದ್ಯೋಗಿಗಳಾಗಿರಬೇಕು. 4. ಅರ್ಜಿದಾರರು ಆಧಾರ್ ಸಂಖ್ಯೆ ಹೊಂದಿರಬೇಕು. 5. ಅರ್ಜಿದಾರರ ಐ.ಎಫ್.ಎಸ್.ಸಿ. ಕೋಡ್ ಹೊಂದಿರುವ ರಾಷ್ಟ್ರೀಕೃತ/ಗ್ರಾಮೀಣ ಬ್ಯಾಂಕ್ ಖಾತೆಗಳನ್ನು ಹೊಂದಿರಬೇಕು. 6. ಅರ್ಜಿದಾರರ ವಯಸ್ಸು ಕನಿಷ್ಠ 25 ರಿಂದ 40 ವರ್ಷಗಳ ಮಿತಿಯಲ್ಲಿರಬೇಕು. 7. ಅರ್ಜಿದಾರರು ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.

ಮೇಲ್ಕಂಡ ಸೌಲಭ್ಯವನ್ನು ಪಡೆಯಲು ಹಿಂದುಳಿದ ವರ್ಗದ ಅರ್ಜಿದಾರರು, ಅವರು ವಾಸಿಸುತ್ತಿರುವ ಆಯಾ ಜಿಲ್ಲೆಯ ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರ ಕಚೇರಿ ಅಥವಾ ಆಯಾ ತಾಲ್ಲೂಕಿನ ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳ ಕಚೇರಿಯಲ್ಲಿ ಸಾಲ ಯೋಜನೆಯ ಅರ್ಜಿ ನಮೂನೆಗಳನ್ನು ಪಡೆಯುವುದು. ನಿಗಮದ ವೆಬ್‌ಸೈಟ್ www.karnataka.gov.in/dbcdc ಇಲ್ಲಿಯೂ ಪಡೆಯಬಹುದಾಗಿರುತ್ತದೆ. ಭರ್ತಿಮಾಡಿದ ಅರ್ಜಿಗಳನ್ನು ಅಗತ್ಯ/ದಾಖಲಾತಿಗಳೊಂದಿಗೆ ದಿನಾಂಕ: 20-10-2018 ರೊಳಗೆ ಸಲ್ಲಿಸುವುದು. ದಿನಾಂಕ: 20-10-2018 ರ ನಂತರ ಬರುವ ಅರ್ಜಿಗಳನ್ನು ಸ್ವೀಕಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್

www.karnataka.gov.in/dbcd ಸಂಪರ್ಕಿಸಬುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ:1125/1235**

## 20 ನೇ ರಾಷ್ಟ್ರೀಯ ಜಾನುವಾರು ಗಣತಿ

ಬೆಂಗಳೂರು, ಅಕ್ಟೋಬರ್ 11, (ಕರ್ನಾಟಕ ವಾರ್ತೆ)

ರಾಷ್ಟ್ರೀಯ ಕಾರ್ಯಕ್ರಮವಾದ 20 ನೇ ಜಾನುವಾರು ಗಣತಿಯನ್ನು ರಾಜ್ಯದಲ್ಲಿ ಒಂದನೇ ಅಕ್ಟೋಬರ್‌ನಿಂದ ಪ್ರಾರಂಭಿಸಲಾಗಿದ್ದು ಮುಂದಿನ ಮೂರು ತಿಂಗಳವರೆಗೆ ಜಾನುವಾರು ಗಣತಿ ನಡೆಯಲಿದೆ.

ಈ ಗಣತಿ ಕಾರ್ಯದಲ್ಲಿ ಪ್ರತಿ ಜಾನುವಾರು, ಕುಕ್ಕುಟ ಹಾಗೂ ಪಶುಸಂಗೋಪನಾ ವಲಯದಲ್ಲಿ ಉಪಯೋಗಿಸಲ್ಪಡುವ ಉಪಕರಣಗಳು ಮತ್ತು ಮೀನುಗಾರಿಕೆ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಕಲೆ ಹಾಕುವ ಸಲುವಾಗಿ ಗಣತಿದಾರರು ರಾಜ್ಯದಲ್ಲಿನ ಕುಟುಂಬ/ಉದ್ಯಮ/ಸಂಸ್ಥೆಗಳಿಗೆ ಭೇಟಿ ನೀಡಿದ ಸಮಯದಲ್ಲಿ ಗಣತಿದಾರರಿಗೆ ನಿಖರವಾದ ಹಾಗೂ ನಿರ್ಧಿಷ್ಟವಾದ ಸ್ಪಷ್ಟಮಾಹಿತಿ ನೀಡಿ ಸಾರ್ವಜನಿಕರು ಸಹಕರಿಸಬೇಕೆಂದು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಆಯುಕ್ತರು ಮನವಿ ಮಾಡಿದ್ದಾರೆ.

ರೈತ ದೇಶದ ಬೆನ್ನೆಲುಬು, ರೈತನ ಬೆನ್ನಲುಬು ಕೃಷಿ, ಕೃಷಿಯ ಬೆನ್ನೆಲುಬು ಪಶುಸಂಗೋಪನೆ. ಪಶುಸಂಪತ್ತು ದೇಶದ ಸಂಪತ್ತು ಎಂಬ ನಾಣ್ಣುಡಿಯಂತ ಪಶುಸಂಪತ್ತಿಗೆ ಪ್ರಾಚೀನ ಕಾಲದಿಂದಲೂ ಮಹತ್ತರವಾದ ಸ್ಥಾನ ದೊರೆತಿದೆ ಹಾಗೂ ಪಶುಸಂಗೋಪನೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಆಧುನಿಕ ಯುಗದಲ್ಲಿ ಜನಗಣತಿಯ ಕಾರ್ಯ ಪ್ರಾರಂಭಗೊಂಡಂತೆ ಜಾನುವಾರು ಗಣತಿ ಕಾರ್ಯವೂ ಸಹ ರಾಜರ ಕಾಲದಿಂದಲೂ ಪ್ರಚಲಿತಗೊಂಡಿರುತ್ತದೆ. ಜಾನುವಾರು ಗಣತಿಯನ್ನು ಪ್ರತಿ 5 ವರ್ಷಗಳಿಗೊಮ್ಮೆ ರಾಷ್ಟ್ರಮಟ್ಟದಲ್ಲಿ ಏಕಕಾಲದಲ್ಲಿ ನಡೆಸಲ್ಪಡುವ ಗಣತಿಯಾಗಿರುತ್ತದೆ.

1897 ರಲ್ಲಿ ಮೈಸೂರು ಸಂಸ್ಥಾನದ ಅರಸರಾದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರು ಮೊದಲ ಬಾರಿಗೆ ಮೈಸೂರು ಸಂಸ್ಥಾನದಲ್ಲಿ ಜಾನುವಾರು ಗಣತಿಯನ್ನು ಪ್ರಾರಂಭಿಸಿದರು. ತದನಂತರ 5 ವರ್ಷಗಳಿಗೊಮ್ಮೆ ಈ ಜಾನುವಾರು ಗಣತಿಯು ನಡೆಯುತ್ತಾ ಬಂದು, ಇಡೀ

ದೇಶದಾದ್ಯಂತ ಈ ಗಣತಿ ಕಾರ್ಯ ಪ್ರಾರಂಭವಾಗಿ ರಾಷ್ಟ್ರೀಯ ಕಾರ್ಯಕ್ರಮವೆನಿಸಿಕೊಂಡಿದೆ. ಈ ಬಾರಿಯ ಗಣತಿಯು 20 ನೇ ರಾಷ್ಟ್ರೀಯ ಜಾನು ಗಣತಿಯಾಗಿರುತ್ತದೆ. ಸದರಿ ಗಣತಿಯನ್ನು ಪ್ರಪ್ರಥಮವಾಗಿ ಭಾರತದಾದ್ಯಂತ ಟ್ಯಾಬ್ಲೆಟ್ ಆಧಾರಿತ ತಂತ್ರಾಂಶದ ಮೂಲಕ ಕೈಗೊಳ್ಳಲಾಗುತ್ತಿದೆ.

ಉದ್ದೇಶ:

ಜಾನುವಾರು ಗಣತಿಯ ಉದ್ದೇಶವೆಂದರೆ ರಾಜ್ಯದಲ್ಲಿರುವ ಜಾನುವಾರು ಕುಕ್ಕುಟ ಹಾಗೂ ಪಶುಸಂಗೋಪನಾ ವಲಯದಲ್ಲಿ ಉಪಯೋಗಿಸಲ್ಪಡುವಂತಹ ಉಪಕರಣಗಳು ಮತ್ತು ಮೀನುಗಾರಿಕೆಗೆ ಸಂಬಂಧಿಸಿದ ಚಟುವಟಿಕೆಗಳು ಹಾಗೂ ಕುಟುಂಬದ ಮುಖ್ಯಸ್ಥನ ಮತ್ತು ಸಾಮಾಜಿಕ ಸ್ಥಿತಿಗಳ ಮಾಹಿತಿಯನ್ನು ಕಲೆಹಾಕುವುದು.

ಜಾನುವಾರು ಗಣತಿಯ ಪ್ರಾಮುಖ್ಯತೆ:

ಜಾನುವಾರು ಗಣತಿಯಿಂದ ಹೊರಬರುವ ಅಂಕಿ–ಅಂಶಗಳಿಂದ ದೇಶದ ಮತ್ತು ರಾಜ್ಯದ ಆರ್ಥಿಕಾಭಿವೃದ್ಧಿಗೆ ಸಂಬಂಧಿಸಿದ ಯೋಜನೆಗಳನ್ನು ಹಾಗೂ ನೀತಿ ನಿರೂಪಣೆಗಳನ್ನು ರೂಪಿಸಲು ಸಹಕಾರಿಯಾಗಿರುತ್ತವೆ. ನೈಸರ್ಗಿಕ ಪ್ರಕೋಪಗಳಾದ ಬರಗಾಲ ಮತ್ತು ಅತಿವೃಷ್ಠಿ ಕಾಲಗಳಲ್ಲಿ ತುರ್ತಾಗಿ ಅಗತ್ಯ ಕ್ರಮ ಕೈಗೊಳ್ಳಲು ಅತ್ಯಂತ ಉಪಯುಕ್ತವಾಗುತ್ತದೆ. ಅವಶ್ಯವಿರುವೆಡೆಯಲ್ಲಿ ಪಶುಚಿಕಿತ್ಸಾಲಯ, ಪಶು ಆಸ್ಪತ್ರೆಗಳನ್ನು ತೆರೆಯಲು ಸಹಾಯವಾಗುತ್ತದೆ. ಜಾನುವಾರುಗಳಿಗೆ ಔಷಧಿ ದಾಸ್ತಾನು ನಿರ್ವಹಣೆ, ಜಾನುವಾರುಗಳಿಗೆ ಮೇವು ಅಂದಾಜಿಸಲು ಮೇವಿನ ಬೀಜದ ಪೂರೈಕೆ ಅಂದಾಜು ಮಾಡಲು, ಹಾಲು, ಮೊಟ್ಟೆ, ಮಾಂಸ ಮತ್ತು ಉಣ್ಣೆ ಉತ್ಪಾದನೆ ಅಂದಾಜಿಸಲು, ರಫ್ತು ಮತ್ತು ಆಮದು ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ನೀತಿ–ನಿಯಮಗಳನ್ನು ರೂಪಿಸಲು, (GDP) ಪಾಲನ್ನು ಅಂದಾಜಿಸಲು ಉಪಯುಕ್ತವಾಗುತ್ತದೆ.

ಸರ್ಕಾರದ ಯೋಜನೆಗಳನ್ನು ಅಭಿವೃದ್ಧಿಪಡಿಸಲು 20 ನೇ ರಾಷ್ಟ್ರೀಯ ಜಾನುವಾರು ಗಣತಿಯ ಕ್ಷೇತ್ರ ಕಾರ್ಯವನ್ನು 2018 ನೇ ಸಾಲಿನ ಅಕ್ಟೋಬರ್ 1 ರಿಂದ 3 ತಿಂಗಳ ಕಾಲ ಜಾನುವಾರು, ಕುಕ್ಕುಟ, ಪಶುಸಂಗೋಪನಾ ವಲಯದಲ್ಲಿ ಉಪಯೋಗಿಸುವ ಉಪಕರಣ ಹಾಗೂ ಮೀನುಗಾರಿಕೆ ಚಟುವಟಿಕೆಗಳ ಮಾಹಿತಿಯನ್ನು ಕಲೆಹಾಕಲು ಗಣತಿದಾರರು ರಾಜ್ಯಾದ್ಯಂತ ಕುಟುಂಬಗಳಿಗೆ/ಉದ್ಯಮಗಳಿಗೆ/ಸಂಘ ಸಂಸ್ಥೆಗಳಿಗೆ ಭೇಟಿ ನೀಡಿದ ಸಮಯದಲ್ಲಿ ಗಣತಿದಾರರಿಗೆ ನಿಖರವಾದ ಹಾಗೂ ನಿರ್ದಿಷ್ಟವಾದ ಮಾಹಿತಿ ನೀಡಿ ಸಹಕರಿಸುವಂತೆ ಸಾರ್ವಜನಿಕರಲ್ಲಿ ಜಾಗೃತಿ ಉಂಟು ಮಾಡಲು ಮಾಧ್ಯಮಗಳ ಮುಖಾಂತರ ಪ್ರಚಾರ ನೀಡಲು ತಮ್ಮಲ್ಲಿ ವಿನಂತಿಸಲಾಗಿದೆ.

ಗಣತಿಯ ವ್ಯಾಪ್ತಿ:

ರಾಜ್ಯದ ಎಲ್ಲಾ ಗ್ರಾಮ ಮತ್ತು ನಗರದಲ್ಲಿನ ಕುಟುಂಬ/ಕೌಟುಂಬಿಕ ಉದ್ಯಮ/ಸಂಸ್ಥೆಗಳಲ್ಲಿ ಅಂದರೆ ಒಟ್ಟು 30,227 ಗ್ರಾಮಗಳು ಮತ್ತು 6523 ವಾರ್ಡ್‌ಗಳಲ್ಲಿ 1.50 ಕೋಟಿ ಕುಟುಂಬಗಳಲ್ಲಿ ಗಣತಿ ಕಾರ್ಯವನ್ನು ಹಮ್ಮಿಕೊಳ್ಳಲಾಗುತ್ತಿದೆ.

ಗಣತಿಯಲ್ಲಿ ಕಲೆಹಾಕುವ ಮಾಹಿತಿ:

ಜಾನುವಾರು: ದನಗಳು, ಎಮ್ಮೆಗಳು, ಕುರಿಗಳು, ಮೇಕೆಗಳು, ಕುದುರೆಗಳು, ಚಿಕ್ಕಕುದುರೆಗಳು, ಕತ್ತೆಗಳು, ಹೇಸರಗತ್ತೆಗಳು, ಒಂಟೆಗಳು, ಹಂದಿಗಳು, ನಾಯಿಗಳು, ಮೊಲಗಳು ಮತ್ತು ಆನೆಗಳ ಸಂಖ್ಯೆಗಳನ್ನು ಕಲೆಹಾಕಲಾಗುತ್ತದೆ.

ಕುಕ್ಕುಟಗಳು:

ಕೋಳಿ, ಬಾತುಕೋಳಿ, ಟರ್ಕಿಕೋಳಿಗಳು, ಎಮು ಮತ್ತು ಇತರೆ ಪಕ್ಷಿಗಳ ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆ.

ಮೇಲಿನ ಜಾನುವಾರು ಹಾಗೂ ಕುಕ್ಕುಟಗಳ ತಳಿವಾರು, ಪ್ರಬೇಧವಾರು, ಲಿಂಗವಾರು, ವಯೋಮಾನವಾರು ಮಾಹಿತಿಯನ್ನು ಸಂಗ್ರಹಿಸುವುದು.

ಪಶುಸಂಗೋಪನಾ ವಲಯದಲ್ಲಿ ಉಪಯೋಗಿಸಲ್ಪಡುವ ಉಪಕರಣಗಳು:

ಹಾಲು ಕರೆಯುವ ಯಂತ್ರ, ಹೊರೆ ಕಟ್ಟುವ ಯಂತ್ರ, ಯಂತ್ರಚಾಲಿನ ಹುಲ್ಲು ಕತ್ತರಿಸುವ ಯಂತ್ರ, ಇನ್‌ಕ್ಯುಬೇಟರ್, ಯಂತ್ರಚಾಲಿತ ಸಗಣಿ ಸಂಗ್ರಹಣೆ ಮತ್ತು ಸಗಣಿ ವಿನಿಯೋಗದ ಉಪಕರಣಗಳ ಅಂಕಿ ಅಂಶಗಳನ್ನು ಸಂಗ್ರಹಿಸಲಾಗುವುದು.

ಮೀನುಗಾರಿಕೆ ಸಂಬಂಧಿತ ಚಟುವಟಿಕೆಗಳು:

ಕುಟುಂಬ ಮತ್ತು ಕೌಟುಂಬಿಕ ಉದ್ಯಮ/ಅಥವಾ ಕುಟುಂಬೇತರ ಉದ್ಯಮ/ಅಥವಾ ಕುಟುಂಬೇತರ ಉದ್ಯಮ/ಸಂಸ್ಥೆಯ ಯಾವುದೇ ಸದಸ್ಯರು ತೊಡಗಿಕೊಂಡಿರುವ ಮುಖ್ಯವಾಗಿ ಮೀನು ಕೃಷಿ ಹಾಗೂ ಮೀನು ಹಿಡುವಳಿ ಹಾಗೂ ಮೀನುಗಾರಿಕೆ ಸಂಬಂಧಿತ ಚಟುವಟಿಕೆಗಳಾದ ಮೀನು ಪೀಲಿಂಗ್ (ಸಿಪ್ಪೆ ಸುಲಿಯುವುದು)/ಮೀನು ಒಣಗಿಸುವ/ಮೀನು ಸಂಸ್ಕರಣೆ ಬಲೆ ಮಾಡುವುದು, ಬಲೆ ನೇಯ್ಗೆ ಮತ್ತು ದೋಣಿಗಳ ರಿಪೇರಿ, ಮೀನು ಮಾರಾಟ, ಅಲಂಕಾರಿಕ ಮೀನುಗಾಗಿಕೆ, ಮೀನುಗರಿಕೆ ಕಾರ್ಮಿಕರ ಸದಸ್ಯರ ಗಂಡು/ಹೆಣ್ಣು ಎಂದು ಪ್ರತ್ಯೇಕವಾಗಿ ಸಂಖ್ಯೆಯನ್ನು ಕಲೆಹಾಕಲಾಗುತ್ತಿದೆ. ಇದಲ್ಲದೇ, ಇತರೆ ಮೀನುಗಾರಿಕೆ ಚಟುವಟಿಕೆಗಳ ಮಾಹಿತಿಯನ್ನು ಸಹ ಸಂಗ್ರಹಿಸಲಾಗುತ್ತದೆ.

ಕುಟುಂಬದ ಮುಖ್ಯಸ್ಥರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಮಾಹಿತಿ:

ಜಾನುವಾರು ಹೊಂದಿರುವ/ಹೊಂದಿಲ್ಲದಿರುವ ಕುಟುಂಬ ಮತ್ತು ಕೌಟುಂಬಿಕ ಉದ್ಯಮದಿಂದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳಿಗಳಾದ ಕುಟುಂಬದ ಮುಖ್ಯಸ್ಥನ ಉದ್ಯೋಗ, ಕೃಷಿ ಹಿಡುವಳಿ, ಶೈಕ್ಷಣಿಕ ಮಟ್ಟ, ಜಾತಿ, ಕುಟುಂಬದ ವಾರ್ಷಿಕ ಆಧಯ ಎಲ್ಲಾ ಮೂಲಗಳಿಂದ, ಕುಟುಂಬ ಪಡೆದಿರುವ ಸಾಂಸ್ಥಿಕ ಮತ್ತು ಆರ್ಥಿಕ ನೆರವುಗಳ ಮಾಹಿತಿಯನ್ನು ಸಂಗ್ರಹಿಸಲಾಗುವುದು.

**ಸಂಖ್ಯೆ:1126/1236**

## All India Sainik Schools Entrance Examination

Bengaluru, October 11 (Karnatka Information)

The All India Sainik Schools Entrance Examination for admission to Calss-VI and Class-IX in Sainik School Kodagu for the Academic Session 2019-20 is scheduled on 06 January 2019 (Sunday) at Bangalore, Bellary, Shivamogga and Sainik School Kodagu. Prospectus and Application Forms are available up to 26 November 2018 on the School website www.sainikschoolkodagu.edu.in (OR) sainikshcooladmission.in for online filling and submission. the all India Sainik Schools Entrance Examination will be conucted as Optical Marks Recognition (OMR) based Examination says official press release.

**ಸಂಖ್ಯೆ:1127/1237**

## Bijapur Sainik School Admission

Bengaluru, October 11 (Karnatka Information)

Applications in prescribed form (online) are invited from Boys only for Bijapur Sainik School admission to Class VI and IX through All India Sainik Schools Entrance Examination. The AISSEE will be on OMR Based System which will have multiple choice questions with four options. Applicant must submit online form only available on website www.ssbj.in and www.sainikschooladmission.in last date for submission application 26th November 2018.

**ಸಂಖ್ಯೆ:1138/1238**

# ಸಚಿವರ ಪ್ರವಾಸ

**ಅಕ್ಟೋಬರ್ 11, ಬೆಂಗಳೂರು, ಕರ್ನಾಟಕ ವಾರ್ತೆ**

**ಕೃಷಿ ಸಚಿವ ಎನ್.ಹೆಚ್. ಶಿವಶಂಕರ ರೆಡ್ಡಿ ಅವರು ಅಕ್ಟೋಬರ್ 12 ರವರೆಗೆ ಮೈಸೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಅಂದೇ ರಾತ್ರಿ ನಗರಕ್ಕೆ ಕೇಂದ್ರಸ್ಥಾನಕ್ಕೆ ಹಿಂತಿರುಗುವರು ಎಂದು ಪ್ರಕಟಣೆ ತಿಳಿಸಿದೆ.**

**ಸಂಖ್ಯೆ:1139/1239**

**ಬೆಂಗಳೂರು ಜಲಮಂಡಲಿ: ಅಕ್ಟೋಬರ್ 12 ರಂದು ಸಕಾನಿಅ(ಪೂರ್ವ-2) ಉಪವಿಭಾಗದಲ್ಲಿ**

**ನೀರಿನ ಅದಾಲತ್**

ಬೆಂಗಳೂರು ಜಲಮಂಡಲಿಯ ಸಕಾನಿಅ(ಪೂರ್ವ-2) ಉಪವಿಭಾಗದಲ್ಲಿ ಶುಕ್ರವಾರ ದಿನಾಂಕ:12.10.2018 ರಂದು ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆಗೆ ಪರಿವರ್ತನೆ ವಿಳಂಬ ಮತ್ತಿತರ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ನೀರಿನ ಅದಾಲತ್‌ಅನ್ನು ಬೆಳಗ್ಗೆ 9.30 ರಿಂದ 11:00 ಗಂಟೆಯವರೆಗೆ ನಡೆಸಲಾಗುತ್ತದೆ.

ದಿನಾಂಕ:12.10.2018 ರಂದು ಸಕಾನಿಅ(ಪೂರ್ವ–2) ಉಪವಿಭಾಗ ವ್ಯಾಪ್ತಿಯ ಎ.ಇ.ಸಿ.ಎಸ್. ಲೇಔಟ್, ಹೂಡಿ, ಭುವನೇಶ್ವರಿನಗರ ಸೇವಾ ಠಾಣೆ ವ್ಯಾಪ್ತಿಯ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ಸಮಸ್ಯೆಗಳನ್ನು ಬಿ.ಇ.ಎಂ.ಎಲ್ ಲೇಔಟ್, ಐ.ಟಿ.ಪಿ.ಎಲ್, ಕುಂದಲಹಳ್ಳಿ ಮುಖ್ಯ ರಸ್ತೆ ಹತ್ತಿರ. ಇಲ್ಲಿನ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಪೂರ್ವ–2) ಕಚೇರಿಯಲ್ಲಿ ಪರಿಶೀಲಿಸಿ ಬಗೆಹರಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: ಕಾರ್ಯ ನಿರ್ವಾಹಕ ಅಭಿಯಂತರರು (ಪೂರ್ವ) 22945158. ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು (ಪೂರ್ವ–2) ಉಪವಿಭಾಗ: 22945115.

ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಲಿಯ 24/7 ದೂರು ನಿರ್ವಹಣಾ ಕೇಂದ್ರದ ದೂರವಾಣಿ ಸಂಖ್ಯೆ:22238888, ಸಹಾಯವಾಣಿ 1916 ಹಾಗೂ ವಾಟ್ಸ್ಆಪ್ ಸಂಖ್ಯೆ:8762228888 ಗೆ ಸಂಪರ್ಕಿಸಬಹುದಾಗಿದೆ.

**ಸಂಖ್ಯೆ:1140/1240**

## BWSSB: Water Adalath in East-2 sub division on October 12th

BWSSB water Adalath is held on 12.10.2018 in AEE(East-2) sub division from 9:30.am to 11.00 am to settle the grievances concerned with the water billing, delay in providing water supply & sanitary connections, delay in converting from domestic connection to non domestic connection & other related issues.

The disputes of consumers of AECS Layout, Hoodi, Bhuvaneshwari Nagar service station coming under AEE(East-2) sub division, will be discussed in detail & problems will be settled in the office of the Assistant Executive Engineer (East-2) sub division, BEML Layout, Near ITPL Kundalahalli Main Road.

Details regarding the adalath can be obtained by the office of EE(East): 22945158, or office of AEE (East-2): 22945115.

For any problems regarding the water supply and all, publics can contact 24x7 call centre: 22238888 helpline number: 1916 & whats app no: 8762228888.

**ಸಂಖ್ಯೆ:1141/1241**

# ಎಸಿಬಿ ದಾಳಿ

**ಅಕ್ಟೋಬರ್ 11, ಬೆಂಗಳೂರು, ಕರ್ನಾಟಕ ವಾರ್ತೆ**

ಹಾನಗಲ್ ತಾಲ್ಲೂಕು ಮೂಡೂರು ನಿವಾಸಿಯಾದ ಫಿರ್ಯಾದಿದಾರರು ಪಿಯುಸಿ ಅಂಕ ಪಟ್ಟಿಯಲ್ಲಿ ತಮ್ಮ ಹೆಸರನ್ನು ತಿದ್ದುಪಡಿ ಮಾಡಿಕೊಡಲು ಸಿ.ಜಿ ಬೆಲ್ಲದ್ ಕಾಲೇಜ ಅಕ್ಕಿಅಲೂರು ಇಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಶ್ರೀ.ಜಿ.ಮನೋಹರ, ಪ್ರಾಚಾರ್ಯರು ಸರ್ಕಾರಿ ಜೂನಿಯರ್ ಕಾಲೇಜ, ಅನವಟ್ಟಿ, ಸೊರಬ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಇವರು ಅರ್ಜಿದಾರರ ಅಂಕಪಟ್ಟಿಯಲ್ಲಿ ಹೆಸರು ತಿದ್ದುಪಡಿ ಮಾಡಿಕೊಡಲು ರೂ.800/-ಗಳ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ.

ದಿನಾಂಕ: 11-10-2018 ರಂದು ಶ್ರೀ.ಜಿ.ಮನೋಹರ ಇವರು ದೂರುದಾರರಿಂದ ರೂ,700/- ಲಂಚದ ಹಣವನ್ನು ಸ್ವೀಕರಿಸುತ್ತಿದ್ದ ಸಂದರ್ಭದಲ್ಲಿ ಶಿವಮೊಗ್ಗ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ನಡೆಸಿದ ಕಾರ್ಯಾಚರಣೆಯಲ್ಲಿ ಸಿಕ್ಕಿಬಿದ್ದಿರುತ್ತಾರೆ. ಇವರನ್ನು ದಸ್ತಗಿರಿ ಮಾಡಿ ಲಂಚದ ಹಣವನ್ನು ವಶಪಡಿಸಿಕೊಳ್ಳಲಾಗಿದೆ. ಪ್ರಕರಣದ ತನಿಖೆ ಮುಂದುವರೆದಿದೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ:1142/1242**

# ACB Raid

Bengaluru, October 11 (Karnataka Information)

A resident of Hangal taluk muduru village studying at C.G Bellad College, Akkialuru had applied for correction of surname in her PUC marks card. Sri.G.Manohar, Principal, Govt. Junior College, Anavatti, Soraba taluk, Shivamogga district had demanded a bribe of Rs.800/- to do the same.

On 11-10-2018 the officials of ACB, Shivamogga district have trapped and arrested Sri. G. Manohar while accepting the bribe amount of Rs.700/- from the complainant. The bribe amount has been seized. The case is under Investigation says official press release.